ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 29-11-1978.

# *ಸಂತುಷ್ಟತೆಯಿಂದ ಪ್ರಸನ್ನತೆ ಮತ್ತು ಪ್ರಶಂಸೆಯ ಪ್ರಾಪ್ತಿ*

(सन्तुष्टता से प्रसन्नता और प्रशंसा की प्राप्ति)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.
- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.
- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.
- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಬಾಪ್‌ದಾದಾ** ಇಂದು ನಮ್ಮ ವಿಶ್ವದಲ್ಲಿ ಪ್ರಕಾಶಿಸುತ್ತಿರುವ ಮಣಿಗಳನ್ನು ನೋಡುತ್ತಿದ್ದಾರೆ. ಪ್ರತಿಯೊಂದು ಮಣಿಗೂ ತನ್ನ ಪ್ರಕಾಶ ಇದೆ. ಪ್ರತಿಯೊಂದು ಮಣಿಯೂ ತನ್ನ ಮೂಲಕ ತಂದೆಯ ಗುಣಗಳು ಹಾಗೂ ಕರ್ತವ್ಯವನ್ನು ಅನುಕ್ರಮವಾಗಿ(ನಂಬರ್ ವಾರ್) ಪ್ರತ್ಯಕ್ಷ ಮಾಡುತ್ತಾ ಇದೆ. ಪ್ರತಿಯೊಂದು ಮಣಿಯ ಮೂಲಕ ಬಾಪ್ ದಾದಾ ಕಂಡುಬರುತ್ತಾರೆ ಈ ವಿಚಿತ್ರ ಮೋಜನ್ನು ಭಕ್ತರು ಎಲ್ಲಿ ನೋಡಿದರೂ ಅಲ್ಲಿ ಎಲ್ಲೆಲ್ಲಿಯೂ ನೀನೇ ಇರುವೆ ಎಂದು ಸ್ತುತಿಸಿದ್ದಾರೆ. ಮಹಾರಥಿಯರಲ್ಲಿಯೂ ಸಹ ಬಾಪ್‌ದಾದಾ ಕಂಡು ಬರುತ್ತಾರೆ. ಹಾಗೂ ಅಂತ್ಯದಲ್ಲಿ ಬಂದು ತೀವ್ರವಾಗಿ ಮುಂದುವರಿಯುವವರಲ್ಲಿಯೂ ಸಹ ಬಾಪ್‌ದಾದಾರವರೇ ಕಂಡುಬರುತ್ತಾರೆ. ಪ್ರತಿಯೊಬ್ಬರ ಬಾಯಿಯಿಂದ ತಂದೆ ತಂದೆ ಎಂಬ ಒಂದೇ ಶಬ್ಧದ ಗೀತೆಯು ಕೇಳಿಬರುತ್ತದೆ. ಸರ್ವ ಬ್ರಾಹ್ಮಣ ಆತ್ಮರ ನಯನಗಳಲ್ಲಿ ಒಬ್ಬ ತಂದೆಯು ಬೆಳಕಿನ ಸಮಾನವಾಗಿ ತುಂಬಿ ಕೊಂಡಿರುತ್ತಾರೆ. ಆದ್ದರಿಂದ ಬ್ರಾಹ್ಮಣ ಪರಿವಾರದಲ್ಲಿ ಎಲ್ಲಿ ನೋಡಿದರೂ ಅಲ್ಲಿ ನೀನೇ ನೀನು ಎನ್ನುವ ಪ್ರತ್ಯಕ್ಷ ಅನುಭವವು ಆಗುತ್ತದೆ. ಇದೇ ಅನುಭವವನ್ನು ಭಕ್ತರು ಭಗವಂತನು ಸರ್ವವ್ಯಾಪಿ ಆಗಿದ್ದಾನೆ ಎನ್ನುವ ಶಬ್ದಗಳಲ್ಲಿ ಹೇಳುತ್ತಾರೆ. ಮಕ್ಕಳೇ, ವರ್ತಮಾನ ಸಮಯದ ಅನುಭವವು ತಂದೆಯು ಪರಂಧಾಮ ನಿವಾಸಿ ಆಗಿದ್ದಾರೆ ಸಾಕ್ಷಿಯಾಗಿದೆ ಅಥವಾ ಸಾಕ್ಷಿಯಾಗಿ ಸಾಕ್ಷಿಯಾಗಿ ಪ್ರತಿಯೊಂದು ಸಂಕಲ್ಪ ಹಾಗೂ ಕರ್ಮದಲ್ಲಿ ಸದಾ ಜೊತೆಯಲ್ಲಿ ಇದ್ದಾರೆ ಎನ್ನುವುದಾಗಿದೆಯೋ? ಪರಂಧಾಮನಿವಾಸಿ ಸಾಕ್ಷಿ ತಂದೆ ಎನ್ನುವ ಅನುಭವ ಆಗುತ್ತದೆಯೋ ಅಥವಾ ಸದಾ ಜೊತೆಗಾರ ತಂದೆ ಎನ್ನುವ ಅನುಭವ ಆಗುತ್ತದೆಯೋ? ಯಾವ ಅನುಭವ ಆಗುತ್ತದೆ? ಸಾಕ್ಷಿ ಎಂದೋ ಅಥವಾ ಜೊತೆಗಾರನೆಂದೋ? ಸರ್ವರ ಜೊತೆಗಾರನು ಸರ್ವವ್ಯಾಪಿ ಆದಂತಾಯಿತಲ್ಲವೇ. ಭಕ್ತರು ಶಬ್ದವನ್ನು ಅನುಕರಣೆ ಮಾಡುತ್ತಾರೆ. ಆದರೆ ಯಾವಾಗ ಹಾಗೂ ಹೇಗೆ ಎನ್ನುವ ಭಾವಾರ್ಥವನ್ನು ಮರೆತುಹೋಗಿರುವ ಕಾರಣದಿಂದ ಸ್ತುತಿಯು ನಿಂದೆಯಂತೆ ಬದಲಾವಣೆ ಆಗಿಬಿಟ್ಟಿದೆ.

ಬಾಪ್‌ದಾದಾ ಸರ್ವ ಮಕ್ಕಳ ವರ್ತಮಾನ ಸ್ವರೂಪದ ಧಾರಣಾ ಸ್ವರೂಪವನ್ನು ನೋಡುತ್ತಾ ವಿಶೇಷವಾಗಿ ಒಂದು ಅಂಶವನ್ನು ನೋಡುತ್ತಿದ್ದಾರೆ,ಅದು ಯಾವುದು? ಸರ್ವ ಮಕ್ಕಳಲ್ಲಿ ಸದಾ ಸಂತುಷ್ಟಮಣಿಗಳು ಎಷ್ಟು ಇದ್ದೀರಿ ಎನ್ನುವುದನ್ನು

ನೋಡುತ್ತಿದ್ದಾರೆ. ಅದಕ್ಕಿಂತಲೂ ವಿಶೇಷವಾದ ಗುಣವು ಚೆಹರೆಯಿಂದ ಬೆಳಗುವಂತಹುದು, ಸಂತುಷ್ಟತೆ ಆಗಿದೆ. ಮೂರು ಪ್ರಕಾರದ ಸಂತುಷ್ಟತೆಯು ಇರುವ ಅಗತ್ಯವಿದೆ. ಒಂದು ತಂದೆಯೊಂದಿಗೆ ಸಂತುಷ್ಟರಾಗಿ ಇರುವುದು, ಎರಡನೆಯದು ಸದಾ ಸ್ವಯಂ ನಿಮ್ಮೊಂದಿಗೆ ಸಂತುಷ್ಟರಾಗಿರುವುದು. ಮೂರನೆಯದು ಸರ್ವಸಂಬಂಧ ಹಾಗೂ ಸಂಪರ್ಕದಿಂದ ಸಂತುಷ್ಟರಾಗಿರುವುದು. ಇದರಲ್ಲಿ ಚೈತನ್ಯ ಆತ್ಮರೂ ಹಾಗೂ ಪ್ರಕೃತಿ ಎರಡೂಬಂದುಬಿಡುತ್ತವೆ. ಸಂತುಷ್ಟತೆಯ ಸಂಕೇತವು ಪ್ರತ್ಯಕ್ಷರೂಪದಲ್ಲಿ ಪ್ರಸನ್ನತೆಯಾಗಿ ಕಂಡುಬರುತ್ತದೆ. ಸದಾ ಪ್ರಸನ್ನಚಿತ್ತ ಆಗಿರುವರು. ಈ ಪ್ರಸನ್ನತೆಯ ಆಧಾರದಿಂದ ಪ್ರತ್ಯಕ್ಷಫಲವಾಗಿ ಅಂತಹ ಆತ್ಮರ ಪ್ರಶಂಸೆಯು ಸದಾ ತಾನಾಗಿಯೇ ಸರ್ವರಿಂದ ಸಿಗುತ್ತದೆ. ವಿಶೇಷತೆಯು ಸಂತುಷ್ಟತೆ ಆಗಿದೆ ಹಾಗೂ ಅದರ ಸಂಕೇತವು ಪ್ರಸನ್ನತೆ ಆಗಿದೆ. ಅದರ ಪ್ರತ್ಯಕ್ಷಫಲವು ಪ್ರಶಂಸೆ ಆಗಿದೆ. ಈಗ ನಿಮ್ಮನ್ನು ನೀವು ನೋಡಿಕೊಳ್ಳಿರಿ. ಪ್ರಶಂಸೆಯನ್ನು ಪ್ರಸನ್ನತೆಯಿಂದಲೇ ಪ್ರಾಪ್ತಿ ಮಾಡಿಕೊಳ್ಳಬಹುದು. ಯಾರು ಸದಾ ಸ್ವಯಂ ಸಂತುಷ್ಟ ಅಥವಾ ಪ್ರಸನ್ನರಾಗಿರುತ್ತಾರೋ ಅವರ ಪ್ರಶಂಸೆಯನ್ನು ಪ್ರತಿಯೊಬ್ಬರೂ ಮಾಡುತ್ತಾರೆ. ನಡೆಯುತ್ತಾ ನಡೆಯುತ್ತಾ ಪುರುಷಾರ್ಥಿ ಜೀವನದಲ್ಲಿ ಸಮಸ್ಯೆಗಳು ಅಥವಾ ಪರಿಸ್ಥಿತಿಗಳು ನಾಟಕದನುಸಾರವಾಗಿ ಬಂದೇ ಬರುತ್ತದೆ. ಜನ್ಮವನ್ನು ತೆಗೆದುಕೊಳ್ಳುತ್ತಲೇ ಮುಂದುವರಿಯುವ ಲಕ್ಷ್ಯವನ್ನು ಇಟ್ಟುಕೊಳ್ಳಬೇಕು, ಎಂದರೆ ಪರೀಕ್ಷೆಗಳು ಹಾಗೂ ಸಮಸ್ಯೆಗಳ ಆಹ್ವಾನ ಮಾಡಬೇಕು. ನೀವು ಮಾಡಿರುವ ಆವಾಹನೆಯನ್ನು ಮರೆತುಬಿಡುತ್ತೀರಾ ಮಾರ್ಗದಲ್ಲಿ ಪಯಣಿಸಬೇಕಾದರೆ ಮಾರ್ಗದ ದೃಶ್ಯಗಳು ಕಾಣದಿರಲು ಸಾಧ್ಯವಿದೆಯೇ? ದೃಶ್ಯಗಳನ್ನು ನೋಡುತ್ತಾ ನಿಂತುಬಿಡುತ್ತೀರಿ. ಆದ್ದರಿಂದ ಗುರಿಯು ದೂರವಾಗಿದೆ ಎನ್ನುವ ಅನುಭವವನ್ನು ಮಾಡುತ್ತೀರಿ. ದೃಶ್ಯಗಳನ್ನು ನೋಡುತ್ತಾ ಅವುಗಳನ್ನು ದಾಟಿಕೊಂಡು ಮುಂದೆ ಹೋಗಬೇಕು. ಆದರೆ ದೃಶ್ಯಗಳನ್ನು ನೋಡಿ ಇದು ಏಕೆ, ಇದು ಏನು, ಇದು ಹೀಗಿಲ್ಲ, ಇದು ಹಾಗಲ್ಲ ಎಂಬ ಈ ಪ್ರಶ್ನೆಗಳಲ್ಲಿ ನಿಂತುಬಿಡುತ್ತೀರಿ. ಪ್ರತಿಯೊಂದು ದೃಶ್ಯವನ್ನೂ ತಿದ್ದಲು ತೊಡಗಿಬಿಡುತ್ತೀರಿ. ಅದನ್ನು ಬದಿಗೆ ಸಿರಿಸಿ ಮುಂದೆ ಹೋಗುವುದಕ್ಕೆ ಬದಲಾಗಿ ತಿದ್ದುಪಡಿ ಮಾಡುವುದರಲ್ಲಿ ತತ್ಪರರಾಗಿಬಿಡುತ್ತೀರಿ. ಆದ್ದರಿಂದ ತಂದೆಯ ನೆನಪಿನ ಸಂಪರ್ಕವನ್ನು ಸಡಿಲ ಮಾಡಿಬಿಡುತ್ತೀರಿ. ಮನೋರಂಜನೆಗೆ ಬದಲಾಗಿ ಮನಸ್ಸನ್ನು ಗೊಂದಲಕ್ಕೆ ಈಡುಮಾಡುತ್ತೀರಿ. ಆಹಾ! ಎಂತಹ ಸೊಗಸಾದ ದೃಶ್ಯ. ಹೀಗೆ ಆಹಾ? ಎನ್ನುವುದಕ್ಕೆ ಬದಲಾಗಿ ಇದೇನು ಎಂದು ಆಶ್ಚರ್ಯವನ್ನು ತುಂಬಾ ಸೂಚಿಸುತ್ತೀರಿ. ಆದ್ದರಿಂದ ನಡೆಯುತ್ತಾ ನಡೆಯುತ್ತಾ ನಿಂತುಬಿಡುತ್ತೀರಿ. ಬಳಲಿಕೆಯ ಕಾರಣದಿಂದ ಒಮ್ಮೊಮ್ಮೆ ತಂದೆಗೆ ಮಧುರವಾದ ದೂಷಣೆಗಳನ್ನು ನೀಡುತ್ತಾ ರಾಯಲ್ ರೂಪದಲ್ಲಿ ತಂದೆಯೊಂದಿಗೂ ಸಹ ಅಸಂತುಷ್ಟರಾಗಿ ಬಿಡುತ್ತೀರಿ. ಮೊದಲೇ ಇಷ್ಟೊಂದು ಏಕೆ ತಿಳಿಸಲಿಲ್ಲ ಎಂದು ಅನೇಕ ಮಕ್ಕಳು ಹೇಳುತ್ತಾರೆ. ಸಹಜಮಾರ್ಗ ಎಂದು ಹೇಳಿದಿರಿ, ಸಹನೆ ಮಾಡಬೇಕಾದ ಮಾರ್ಗ ಎಂದು ಹೇಳಲಿಲ್ಲ ಎಂದು ಹೇಳುತ್ತಾರೆ. ಸಹಜ ಮಾರ್ಗಕ್ಕೆ ಬದಲಾಗಿ ಸಹನೆ ಮಾಡುವ ಮಾರ್ಗ ಎಂದು ಅನುಭವ ಮಾಡುತ್ತಾರೆ. ಆದರೆ ಸಹನೆ ಮಾಡುವುದೇ ಮುಂದುವರೆಯುವುದಾಗಿದೆ. ವಾಸ್ತವವಾಗಿ ಸಹನೆ ಮಾಡಬೇಕಾಗುವುದಿಲ್ಲ. ಆದರೆ ತಮ್ಮ ದೌರ್ಬಲ್ಯದ ಕಾರಣದಿಂದ ಸಹನೆ ಮಾಡುವ ಅನುಭವವಾಗುತ್ತದೆ. ಬೆಂಕಿಯ ಗುಣವು ಸುಡುವುದಾಗಿದೆ. ಆದರೆ ಆ ಗುಣದ ತಿಳುವಳಿಕೆ ಇಲ್ಲದ ಕಾರಣದಿಂದ ಅದರಿಂದ ಲಾಭವನ್ನು ತೆಗೆದುಕೊಳ್ಳುವುದಕ್ಕೆ ಬದಲಾಗಿ ನಷ್ಟ ಮಾಡಿಕೊಂಡರೆ ಸುಖಕ್ಕೆ ಬದಲಾಗಿ ಸಹನೆ ಮಾಡ ಬೇಕಾಗುತ್ತದೆ. ಏಕೆಂದರೆ ವಸ್ತುವಿಗೆ ಬದಲಾಗಿ ಸ್ವಯಂ ನಿಮ್ಮನ್ನು ಸುಟ್ಟು ಕೊಂಡಂತೆಯೇ. ಗುಣದ ಜ್ಞಾನ ಇಲ್ಲದಿರುವ ಕಾರಣದಿಂದ ಸುಖಕ್ಕೆ ಬದಲಾಗಿ ಸಹನೆ ಮಾಡಬೇಕಾಗುತ್ತದೆ. ಹಾಗೆಯೇ ಸಮಸ್ಯೆಗಳು ಅಥವಾ ಪರಿಸ್ಥಿತಿಗಳು ಬರುವ ಕಾರಣದ ತಿಳುವಳಿಕೆಯು ಇಲ್ಲದಿರುವುದರಿಂದ ಮುಂದುವರಿಯುವ, ಸುಖದ ಅನುಭವಕ್ಕೆ ಬದಲಾಗಿ ಸಹನೆ ಮಾಡುವ ಅನುಭವವನ್ನು ಮಾಡುತ್ತೀರಿ.

ಆದ್ದರಿಂದ ಸಹಜ ಮಾರ್ಗಕ್ಕೆ ಬದಲಾಗಿ ಸಹನೆ ಮಾಡುವ ಮಾರ್ಗ ಎಂದು ಅನುಭವ ಮಾಡುತ್ತೀರಿ. ಇಂತಹ ಮಕ್ಕಳು ತಂದೆಯೊಂದಿಗೆ ಎಂದರೆ ತಂದೆಯ ಜ್ಞಾನದೊಂದಿಗೆ ಅಥವಾ ಜ್ಞಾನದ ಧಾರಣೆಯ ಮಾರ್ಗದೊಂದಿಗೆ ಅಸಂತುಷ್ಟರಾಗಿರುತ್ತಾರೆ. ಜೊತೆ ಜೊತೆಗೆ ಸ್ವಯಂ ತಮ್ಮೊಂದಿಗೂ ಅಸಂತುಷ್ಟರಾಗಿರುತ್ತಾರೆ. ಸ್ವಯಂ ತಮ್ಮೊಂದಿಗೇ ಅಸಂತುಷ್ಟರಾಗುವುದರಿಂದ ಅವರು ಸರ್ವರ ಸಂಬಂಧ ಹಾಗೂ ಸಂಪರ್ಕದೊಂದಿಗೂ ಅಸಂತುಷ್ಟರಾಗಿಬಿಡುತ್ತಾರೆ. ಈ ಕಾರಣದಿಂದ ಪ್ರಸನ್ನ ಎಂದರೆ ಸದಾ

ಆನಂದದಲ್ಲಿರುವುದಿಲ್ಲ. ಈಗತಾನೇ ಸಂತುಷ್ಟ ಎಂದರೆ ಪ್ರಸನ್ನಚಿತ್ರರಾಗಿರುವವರು ಮತ್ತೆ ಇದೀಗಲೇ ಅಸಂತುಷ್ಟರಾಗಿ ಬಿಡುತ್ತಾರೆ. ಆದ್ದರಿಂದ ಸಂಗಮಯುಗದ ವಿಶೇಷ ವರದಾನವನ್ನು ಸ್ವಯಂ ನೀವೂ ತೆಗೆದುಕೊಳ್ಳಿರಿ ಹಾಗೂ ಇತರರಿಗೂ ನೀಡಿರಿ. ಅಂತಹವರೇ ತಂದೆಯ ಮಹಿಮೆ ಹಾಗೂ ತಮ್ಮ ಪ್ರಶಂಸೆ ಮಾಡಲು ಸಾಧ್ಯವಾಗುತ್ತದೆ. ಪ್ರಶಂಸೆಯ ಶ್ರೇಷ್ಠ ಸಾಧನವೇ ಪ್ರತಿಯೊಬ್ಬ ಬ್ರಾಹ್ಮಣರ ಪ್ರಸನ್ನತೆ ಆಗಿದೆ. ಯಾವುದೇ ಕಾರ್ಯದ ಪ್ರಶಂಸೆಯು ಸರ್ವರ ಪ್ರಸನ್ನತೆಯ ಆಧಾರವನ್ನು ಅವಲಂಭಿಸಿರುತ್ತದೆ. **ಈ ಯಜ್ಞದ ಅಂತಿಮ ಆಹುತಿಯು ಸರ್ವಬ್ರಾಹ್ಮಣರ ಸದಾ ಪ್ರಸನ್ನತೆ ಆಗಿದೆ. ಆಗ ಪ್ರತ್ಯಕ್ಷತೆ ಎಂದರೆ ಪ್ರಶಂಸೆಯ ಪ್ರತಿಧ್ವನಿಯು ಮೊಳಗುವುದು, ಎಂದರೆ ವಿಜಯದ ಪತಾಕೆಯನ್ನು ಹಾರಿಸುವುದು.** ಈಗ ಏನು ಮಾಡಬೇಕು ಎನ್ನುವುದನ್ನು ತಿಳಿದುಕೊಂಡಿದ್ದೀರಾ, ಸದಾ ಪ್ರಸನ್ನರಾಗಿ ಇರಿ, ಹಾಗೂ ಸದಾ ಸರ್ವರನ್ನೂ ಪ್ರಸನ್ನ ಮಾಡಿರಿ. ಒಳ್ಳೆಯದು.

**ಇಂತಹ ಸದಾ ತಂದೆಯ ಆಜ್ಞಾಪಾಲಕರು, ಸದಾ ಸಂತುಷ್ಟರಾಗಿರುವವರು, ಪ್ರಸನ್ನರಾಗಿರುವವರು, ಸರ್ವರಿಗೂ ಸದಾ ಪ್ರಸನ್ನತೆಯ ವರದಾನವನ್ನು ನೀಡುವ ಮಹಾದಾನಿ, ವರದಾನಿ ಮಕ್ಕಳಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ಬೊಂಬಾಯಿ ನಿವಾಸಿಗಳಿಗೆ ವಿಶೇಷ ರೂಪದಿಂದ ಬಾಪ್ ದಾದಾ ನೆನಪು ಪ್ರೀತಿಯನ್ನು ಕೊಡುತ್ತಿದಾರೆ. ಬೊಂಬಾಯಿ ನಿವಾಸಿಗಳಲ್ಲಿ ಧೈರ್ಯ ಹಾಗೂ ಉತ್ಸಾಹವು ತುಂಬಾ ಚೆನ್ನಾಗಿದೆ. ಬೊಂಬಾಯಿ ನಿವಾಸಿಗಳನ್ನು ನೋಡಿ ತಂದೆಯ ಜೊತೆಗೆ ಪ್ರಕೃತಿಯೂ ಸಹ ಸ್ವಾಗತ. ಮಾಡಿದೆ (ಏಕೆಂದರೆ ಥಂಡಿಯು ತುಂಬಾ ಆಗಿಬಿಟ್ಟಿದೆ) ಪ್ರಕೃತಿಯು ಅಭ್ಯಾಸ ಮಾಡಿಸಿದೆ. ಅಂತ್ಯದಲ್ಲಿ ಬರುವ ಪರೀಕ್ಷೆಯ ಅಭ್ಯಾಸದ ಅನುಭವವನ್ನು ಮೊದಲಿನಿಂದಲೇ ಮಾಡಿಸಿ ಪಕ್ಕಾ ಬಲಶಾಲಿಗಳನ್ನಾಗಿ ಮಾಡಿಬಿಟ್ಟಿದೆ. ಆದ್ದರಿಂದ ಗಾಬರಿ ಆಗಬೇಡಿರಿ, ಬೊಂಬಾಯಿ ನಿವಾಸಿಗಳಿಗೆ ತಂದೆಯೊಂದಿಗೆ ಪ್ರೀತಿ ಇದೆ ಅಲ್ಲವೇ. ಬಾಪ್‌ದಾದಾರವರಿಗೂ ಸಹ ಮಕ್ಕಳೊಂದಿಗೆ ಪ್ರೀತಿ ಇದೆ. ಬೊಂಬಾಯಿ ನಿವಾಸಿಗಳು ಈಗ ಸದಾ ಸಂತುಷ್ಟತೆ ಹಾಗೂ ಪ್ರಸನ್ನತೆಯ ಪರೀಕ್ಷೆಯಲ್ಲಿ ಮೊದಲನೆಯ ವರ್ಗದಲ್ಲಿ ಉತ್ತೀರ್ಣರಾಗಿದ್ದೀರಿ, ಬಹಳ ಚೆನ್ನಾಗಿದೆ. ನೀವು ಜೊತೆಯನ್ನು ಬಿಟ್ಟರೂ ಬಾಪ್ ದಾದಾ ಬಿಡುವುದಿಲ್ಲ. ವಿಶೇಷವಾಗಿ ಬೊಂಬಾಯಿ ಹಾಗೂ ದೆಹಲಿಯಲ್ಲಿ ಆದಿರತ್ನಗಳು ಹೆಚ್ಚಾಗಿ ಇದ್ದಾರೆ. ವಿಶ್ವಸೇವೆಯ ಸ್ಥಾಪನೆಯ ಕಾರ್ಯದಲ್ಲಿ ಬೊಂಬಾಯಿ ಹಾಗೂ ದೆಹಲಿಯ ವಿಶೇಷ ಸಹಯೋಗ ಇದೆ. ಸಮಯದಲ್ಲಿ ಸಹಯೋಗಿ ಆಗುವವರ ಮಹತ್ವ ಇರುತ್ತದೆ. ಆದ್ದರಿಂದ ಸಹಯೋಗಿ ಮಕ್ಕಳೊಂದಿಗೆ ತಂದೆಗೂ ಸ್ನೇಹ ಇದೆ. ಒಳ್ಳೆಯದು.

**ತಂಡಗಳೊಂದಿಗೆ**: ಸದಾ ವಿಜಯೀಭವದ ವರದಾನಮೂರ್ತಿ ಆಗಿದ್ದೀರಾ? ವರದಾತನು ಏನು ವರದಾನವನ್ನು ಕೊಟ್ಟಿದ್ದಾರೆಯೋ ಆ ವರದಾನವನ್ನು ಸದಾ ಜೀವನದಲ್ಲಿ ಉಪಯೋಗಿಸಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ ಆಗಿದೆ. ಈ ವರದಾನವನ್ನು ಜೀವನದಲ್ಲಿ ಅಳವಡಿಸಿಕೊಳ್ಳಿರಿ ಎಂದರೆ ವರದಾನಿಸ್ವರೂಪ ಆಗಿರಿ. ಹಾಗೆ ಆಗಿದ್ದೀರಾ? ಮಹಾವೀರರನ್ನೂ ವರದಾನಿ ಎಂದು ಕರೆಯಲಾಗುತ್ತದೆ. ಹಾಗೂ ಶಕ್ತಿಯರನ್ನೂ ವರದಾನಿ ಎಂದು ಕರೆಯಲಾಗುತ್ತದೆ. ಈಗ ನಿಮ್ಮ ಜಡಚಿತ್ರಗಳಿಂದ ಅನೇಕ ಮಕ್ಕಳು ವರದಾನವನ್ನು ಪ್ರಾಪ್ತಿಮಾಡಿಕೊಳ್ಳುತ್ತಾರೆ. ಆದ್ದರಿಂದ ಚೈತನ್ಯದಲ್ಲಿ ನೀವು ವರದಾನಿಗಳಿಂದ ಜೋಳಿಗೆಯನ್ನು ಭರ್ತಿ ಮಾಡುವವರಾಗಿದ್ದೀರಲ್ಲವೇ. ಮಹಾವೀರರಾಗಿದೀರಲ್ಲವೇ. ಮಹಾವೀರರು ಎಂದರೆ ಸದಾ ವಿಜಯಶಾಲಿಗಳು. ತಂದೆಯು ಅವಿನಾಶಿ ಆಗಿರುವ ಹಾಗೆಯೇ ವರದಾನವೂ ಅವಿನಾಶಿ ಆಗಿದೆ, ಅಲ್ಪಕಾಲದಲ್ಲಿ. ಆದರೆ ಅದನ್ನು ಕಾಪಾಡಿಕೊಳ್ಳುವುದು ನಿಮ್ಮ ಕರ್ತವ್ಯ ಆಗಿದೆ. ಅದನ್ನುಕೊಡುವುದು ತಂದೆಯ ಕರ್ತವ್ಯ ಆಗಿದೆ. ವರದಾನವನ್ನು ಕಾಪಾಡಿಕೊಳ್ಳುವುದು ಬರುತ್ತದೆ ಅಲ್ಲವೇ. ಅಥವಾ ಕಳ್ಳತನ ಆಗಿಬಿಡುತ್ತದೆಯೋ. ನಾನು ತೆಗೆದುಕೊಳ್ಳುವುದಿಲ್ಲ ಆದರೆ ಕೊಡುತ್ತೇನೆ ಎನ್ನುವ ಒಂದು ಮಾತನ್ನು ಮಾತ್ರ ನೆನಪಿಟ್ಟುಕೊಳ್ಳಿರಿ. ಈಗ ತೆಗೆದುಕೊಳ್ಳುವ ದಿನಗಳು ಸಮಾಪ್ತಿ ಆಗಿಬಿಟ್ಟಿದೆ. ಈಗ ದಾತಾ ಆಗಿ ಕೊಡುವ ಸಮಯ ಆಗಿದೆ. ಬೇಡುವುದು ಬಾಲ್ಯದಲ್ಲಿ ನಡೆಯುತ್ತದೆ. ಸಣ್ಣ ಆಟದ ವಸ್ತುವನ್ನು ಕೊಡು ಎಂದು ವಾನಪ್ರಸ್ತದಲ್ಲಿರುವವರು ಕೇಳಿದರೆ ಅದು ಹೇಗಿರುತ್ತದೆ? ಸ್ವಲ್ಪ ಶಕ್ತಿಯನ್ನು ಕೊಡಿ, ಸ್ವಲ್ಪ ಸಹಾಯ ಮಾಡಿರಿ ಎನ್ನುವುದು

ಆಟದ ವಸ್ತುಗಳನ್ನು ಬೇಡಿದಂತೆ ಆಗುತ್ತದೆ. ಈಗ ಸ್ವಯಂ ತೃಪ್ತ ಆತ್ಮ ಆಗಿರಿ. ದಾತಾನ ಮಕ್ಕಳಾಗಿ ಬೇಡುತ್ತಾ ಇದ್ದರೆ ನೋಡುವವರು ಏನೆಂದು ಹೇಳುವರು? ಸ್ವಯಂ ಸದಾ ಸಫಲತಾಮೂರ್ತಿ ಆಗುವುದೇ ಸಫಲತೆಯ ಸಾಧನ ಆಗಿದೆ. ಸ್ವಯಂ ನಿಮ್ಮ ವೃತ್ತಿಯ ಕಂಪನಗಳನ್ನು ಪ್ರಸಾರ ಮಾಡಬೇಕು. ಈ ಕಂಪನಗಳ ಆಧಾರದಿಂದ ಸರ್ವರಿಗೂ ಅನುಭವ ಆಗುವುದು. ಆದ್ದರಿಂದ ಕಾರ್ಯವನ್ನು ಮಾಡುವುದಕ್ಕೆ ಮಾಡುವುದಕ್ಕೆ ಮೊದಲು ವಿಶೇಷವಾಗಿ ಸ್ವಯಂನ ಬುದ್ಧಿಯ ವೃತ್ತಿಯಮೇಲೆ ಗಮನದ ಭಟ್ಟಿ ಮಾಡಬೇಕು. ಇದರಿಂದಲೇ ಕಂಪನಗಳ ಮೂಲಕ ಅನೇಕರ ವೃತ್ತಿಯನ್ನು ಪರಿವರ್ತನೆ ಮಾಡಬಹುದು. ಮೊದಲು ಈ ಗಮನ ಇಟ್ಟುಕೊಳ್ಳಿರಿ. ಸದಾ ಆನಂದದ ಉಯ್ಯಾಲೆಯಲ್ಲಿ ತೂಗಿಕೊಳ್ಳುತ್ತಾ ಇರಿ. ಹಸನ್ಮುಖವು ಅನೇಕರನ್ನು ತನ್ನ ಕಡೆಗೆ ಆಕರ್ಷಣೆ ಮಾಡುತ್ತಾರೆ

**ಕುಮಾರಿಯರೊಂದಿಗೆ**: ಕುಮಾರಿಯರಮೇಲೆ ಬಹಳ ದೊಡ್ಡ ಜವಾಬ್ಧಾರಿ ಇದೆ. ಒಬ್ಬರು ಅನೇಕರ ಕಲ್ಯಾಣಕ್ಕೆ ನಿಮಿತ್ತರಾಗಬಹುದು. ವಿಶ್ವದ ಕಲ್ಯಾಣಕ್ಕೆ ನಿಮಿತ್ತ ಆಗುವವರೇ ಬ್ರಹ್ಮಾಕುಮಾರಿ. ಇಡೀ ವಿಶ್ವದ ಕಲ್ಯಾಣಕಾರಿ ಆಗಬೇಕು, ಕೇವಲ ಕೆಲವರ ಕಲ್ಯಾಣಕಾರಿ ಆಗುವುದಿಲ್ಲ. ಲಗನ್ ಅಥವಾ ಸಂಬಂಧದಲ್ಲಿ ಕೊರತೆ ಇದ್ದರೆ ವಿಘ್ನವು ತನ್ನ ಕಾರ್ಯವನ್ನು ಮಾಡುವುದು. ಬೆಂಕಿಯು ಪ್ರಜ್ವಲಿತ ಆಗಿದ್ದರೆ ಕಸವು ಭಸ್ಮವಾಗಿಬಿಡುವುದು. ಲಗನ್ ಅಥವಾ ಸಂಬಂಧ ಇದ್ದರೆ ವಿಘ್ನವು ಉಳಿಯಲಾರದು. ಕರ್ಮಯೋಗದಿಂದ ಕರ್ಮ ಭೋಗವೂ ಸಹ ಪರಿವರ್ತನೆ ಆಗಿಬಿಡುತ್ತದೆ. ಪರಿವರ್ತನೆ ಮಾಡುವುದು ನಿಮ್ಮ ಸಾಹಸದ ಕಾರ್ಯ ಆಗಿದೆ. ಕುಮಾರಿಯರ ಮೇಲಂತೂ ಸದಾ ಬಾಪ್‌ದಾದಾರವರಿಗೆ ಭರವಸೆ ಇದೆ. ಒಳ್ಳೆಯದು. ಓಂ ಶಾಂತಿ.

ರಿವೈಜ್ ಕೋರ್ಸ್/ಅವ್ಯಕ್ತ ಮುರಳಿ 29-11-1978.

***ಸಂತುಷ್ಟತೆಯಿಂದ ಪ್ರಸನ್ನತೆ ಮತ್ತು ಪ್ರಶಂಸೆಯ ಪ್ರಾಪ್ತಿ***

ಪ್ರತಿಯೊಬ್ಬ ಬ್ರಾಹ್ಮಣ ಆತ್ಮನಿಗೆ ತಂದೆ ಜೊತೆ ಇರುವ ಹಾಗೆ ಅನುಭವವಾಗುತ್ತದೆ. ಪ್ರತಿ ಕರ್ಮದಲ್ಲಿಯ ಜೊತೆ ಇದ್ದ ಹಾಗೆ ಅನುಭವವಾಗುವುದನ್ನು ಭಕ್ತರು ಸರ್ವವ್ಯಾಪಿ ಎಂದು ಹೇಳಿದ್ದಾರೆ. ಯಾವ ವಿಧವಾಗಿ ಎಂಬ ಭಾವವನ್ನು ಮರೆತ ಕಾರಣದಿಂದ ಅದು ಸ್ತುತಿಗೆ(ಮಹಿಮೆ) ಬದಲು ನಿಂದೆಯಾಗಿಬಿಟ್ಟಿದೆ. ಸಂತುಷ್ಟತೆ ಅರ್ಥಾತ್ ತಂದೆಯೊಂದಿಗೆ, ಸ್ವಯಂನೊಂದಿಗೆ, ಸರ್ವ ಸಂಬಂಧ ಸಂಪರ್ಕಗಳೊಂದಿಗೆ ಸಂತುಷ್ಟವಾಗಿ ಇದ್ದಾಗ ಎಲ್ಲರಿಗೂ ಪ್ರಸನ್ನಚಿತ್ತರಾಗಿ ಕಾಣಿಸುತ್ತೀರಿ, ಪ್ರಶಂಸೆ ಲಭಿಸುತ್ತದೆ. ಯಾವ ಗುಣದ ಬಗ್ಗೆಯಾದರೂ ಜ್ಞಾನವಿಲ್ಲದಿದ್ದಾಗ ಲಾಭಕ್ಕೆ ಬದಲು ನಷ್ಟವನ್ನು, ಸುಖಕ್ಕೆ ಬದಲು ದುಃಖವನ್ನು ಸಹಿಸಬೇಕಾಗಿ ಬರುತ್ತದೆ. ಎಂದು ಶಿವ ಪರಮಾತ್ಮ ಹೇಳುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

ಆತ್ಮಿಕ ಸ್ಥಿತಿ/ಯೋಗ ಸ್ಥಿತಿ .

ನಾನಾತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಂದೆಯ ಗುಣಗಳನ್ನು, ಕರ್ತವ್ಯವನ್ನು ಪ್ರತ್ಯಕ್ಷ ಮಾಡಿ ಬಾಪ್‌ದಾದಾರವರನ್ನು ತೋರಿಸುವ ಪ್ರಕಾಶಿಸುವಮಣಿ.

2. ನಾನು ಪ್ರತಿ ಸಂಕಲ್ಪ, ಪ್ರತಿ ಕರ್ಮದಲ್ಲಿ ಬಾಪ್‌ದಾದಾರವರನ್ನು ಜೊತೆಯಲ್ಲಿ ಅನುಭವ ಮಾಡಿಕೊಂಡಿದ್ದೇನೆ.

3. ನಾನು ತಂದೆಯೊಂದಿಗೆ, ಸದಾ ಸ್ವಯಂನೊಂದಿಗೆ, ಸರ್ವ ಸಂಬಂಧ ಸಂಪರ್ಕದಲ್ಲಿ ಸಂತುಷ್ಟವಾಗಿರುವ ಸಂತುಷ್ಟ ಮಣಿ.

4. ನಾನು ಸಂತುಷ್ಟವಾಗಿ ಅಥವಾ ಪ್ರಸನ್ನವಾಗಿ ಇರುತ್ತಾ ಪ್ರಸನ್ನತೆಯಿಂದ ಎಲ್ಲರಿಂದಲೂ ಪ್ರಸಂಸೆಯನ್ನು ಪಡೆದಿದ್ದೇನೆ.

5. ನಾನು ಈಶ್ವರೀಯ ಜನ್ಮ ಪಡೆದಾಗಿನಿಂದ ಮುಂದುವರೆಯಬೇಕೆಂಬ ಲಕ್ಷ್ಯವನ್ನಿಟ್ಟು ಪರೀಕ್ಷೆಗಳನ್ನು ಮತ್ತು ಸಮಸ್ಯೆಗಳೆಂಬ ದೃಶ್ಯವನ್ನು ದಾಟಿ ಗುರಿಯನ್ನು ತಲುಪಿದ್ದೇನೆ.

6. ನಾನು ಸಂಗಮಯುಗದ ವಿಶೇಷ ಖಜಾನೆಯಾದ ಅತೀಂದ್ರಿಯ ಸುಖವನ್ನು ಅನುಭವಿಸುತ್ತಿದ್ದೇನೆ.

7. ನಾನು ಪರಮಾತ್ಮನಿಂದ ಸಂತುಷ್ಟತೆ ಮತ್ತು ಪ್ರಸನ್ನತೆ ಎಂಬ ವರದಾನವನ್ನು ಸ್ವೀಕರಿಸಿ ಇತರರಿಗೂ ಕೊಟ್ಟಿದ್ದೇನೆ.

8. ನಾನು ಸದಾಕಾಲಕ್ಕಾಗಿ ಪ್ರಸನ್ನವಾಗಿ ಇರುತ್ತಾ ಪ್ರಶಂಸೆಯ ಧ್ವನಿಯನ್ನು ಮೊಳಗಿಸಿ ವಿಜಯದ ಪತಾಕೆಯನ್ನು ಹಾರಿಸಿದ್ದೇನೆ.